(87)2

Regd No B G 155 Sri 10–5–1965

ಸತ್ಯವಾದಿ

48 th Year
Satyavadi
DAILY
MYSORE 4

ಸಂಸ್ಥಾಪಕರು – ಅರಮನೆಸಿಂಸ್ಕೇದಾರ್ ಎಂ ಎ ಶುಬ್ಬರಾಯುರು ‖ ಸಂಪಾದಕರು – ಧರ್ಮಪ್ರಚಾರವಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ವಿದೇಶೀ ಪತ್ರಿಕೆಗಳ ಹುಚ್ಚಾಟ

ನವದೆಹಲಿ— ಭಾರತವು ಸಿಂಧ್-ಕಚ್‌ನಲ್ಲಿ ಆಕ್ರಮಣ ನಡೆಯುತ್ತಿದೆಯೆಂದೂ ಅದಕ್ಕೆ ಯುದ್ಧದ ಹುಚ್ಚೆಂದೂ ಪಾಕಿಸ್ತಾನ ಪರ ವಿದೇಶೀ ಪತ್ರಿಕೆಗಳು ಪ್ರಕಟಿಸುತ್ತಿರುವುದು ತಪ್ಪು ಅವಿವೇಕ ಹುಚ್ಚಾಟವೆಂದು ಪ್ರಧಾನಿ ಶಾಸ್ತ್ರಿಗಳು ಹೇಳಿದರು.

★

ಷೇಕ್ ಅಬ್ದುಲ್ಲ

ನವದೆಹಲಿ— ಷೇಕ್ ಅಬ್ದುಲ್ಲ ಮತ್ತು ವಿಜಿನ್ ಬೇಗ್ ಮತ್ತು ಬೇಗಂ ಅಬ್ದುಲ್ಲ ನೊನೆ ದಿಲ್ಲಿಗೆ ತಲಪಿದರು ; ಷೇಕ್ ಮತ್ತು ಬೇಗ್ ಕೂಡಲೇ ಭಾರತ ರಕ್ಷಣಾ ನಿಬಂಧನೆ ಮೇರೆ ಬಂಧಿಸಲ್ಪಟ್ಟ ನೀಲಗರಿಯ ಉಟಕಮಂಡಿಗೆ ಹೋಗಬೇಕೆಂಬ ಆಜ್ಞೆ ಕೊಡಲಾಯಿತು — — ಸಂಜೆ ಉಡಕಮಂಡಿಗೆ ತಲುಪಿದರು ಇವುಗಳೆಲ್ಲ ಸಾಂಕರ್ಯಗಳಿವೆ : ನಿರ್ಬಂಧವಿಲ್ಲ: ಆದರೆ ಉಟಕಮಂಡಿನ ಆಚೆ ಹೋಗಕೂಡದು — ಬೇಗಂ ಅಬ್ದುಲ್ಲರು ಜಮ್ಮು ಕಾಶ್ಮೀರಕ್ಕೆ ಹೋಗುವುದು ಪ್ರತಿಬಂಧಿಸಲಾಗಿದೆ.

★

ಗುಂಡಿಗೆ ಬಲಿ

ಶ್ರೀನಗರ — ಷೇಕ್‌ನ ಮೇಲಿನ ಕಾರ್ಯಕ್ಕೆ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದ ಗುಂಪಿನ ಮೇಲೆ ಪೋಲೀಸರು ಗುಂಡುಹಾರಿಸಿದರು ; ನಾಲ್ವರು ಸತ್ತರು.

★

ಪಾಕಿಸ್ತಾನದಲ್ಲಿ

ರಾವಲ್ಪಿಂಡಿ— ಷೇಕ್ ಅಬ್ದುಲ್ಲರ ಪಸ್ತಗಿರಿಯನ್ನು ಪ್ರತಿಭಟಿಸಿ ಪಾಕಿಸ್ತಾನ ಪಟ್ಟಣಗಳಲ್ಲಿ ರ್ಯಾಲಿಗಳು ಸಡೆದವು — ಆಫೀಸುಗಳೂ ಸ್ಕೂಲುಗಳೂ ಮುಚ್ಚಿಟ್ಟಿದ್ದವು.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ ಜ್ಯೋತಿಶ್ವಿದ್ವಿಸ್ಮಹೆ
ಸಂಪತ್ಕೃಷ್ಣಜ್ಯೋಯಿಸಂವತ್ಸರದ
11 ಮಂಗಳವಾರ ವಿಕಾರಿಯ ಉತ್ತರ

ಆಸ್ಪತ್ರೆಗೆ ಸಾಗಿಸಲಾಯಿತು

ಪಂಜಿಂ — ಗೋವಾ ಮುಖ್ಯ ಮಂತ್ರಿಯವರು ರಾಜೀನಾಮೆ ಕೊಡಬೇಕೆಂದು ಉಪವಾಸ ಮಾಡುತ್ತಿರುವ ಮಹಾರಾಷ್ಟ್ರ ಶಾಸನಸಭಾ ಸದಸ್ಯೆ ಸತಿ ಅಥೈಡೆಯವರು ತೀರ ನಿಶ್ಯಕ್ತಿಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು.

ನೇರ ಮಾತುಕತೆಗೆ ಟೊಜೆನೆ

ಮಾಸ್ಕೊ — ಭಾರತ-ಪಾಕಿಸ್ತಾನಗಳು ತಮ್ಮ ಗಡಿ ದ್ವಯಸ್ಥೆಗೆ ನೇರ ಮಾತುಕತೆ ನಡೆಸಬೇಕೆಂದು ರಷ್ಯಾ ಸೂಚಿಸಿದೆ.

ಆರೋಗ್ಯ ನಡುಗೆ

ಟೋಕಿಯೊ— ಹೊಸಡಾಗಿ ಏರ್ಪಡಿಸಿರುವ ರಾಷ್ಟ್ರೀಯ ಆರೋಗ್ಯ ಚಳವಳಿಯನ್ವಯಿಸಿ, 50 ವರ್ಷಗಳಿಗೆ ಮೇಲ್ಪಟ್ಟ 5 ಮಂತ್ರಿಗಳು 500 ಜನರೊಡನೆ 'ಆರೋಗ್ಯದಿಂದಿರಿ' ನಡುಗೆ ಎಂಬೂರಿಗೆ ನಡೆದರು.

ಭಾವೆಯರ ಸಲಹೆ

ವಾರ್ಧಾಗಂಜ್— ಕಚ್‌ನ ರಣ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಭಾರತದಪಾಕಿಸ್ತಾನಗಳ ಜುಪುದಾದ ಒಂದು ರೀತಿಯ ರಾಷ್ಟ್ರಕೂಟವೇರ್ಪಡಬೇಕೆಂದು ಆಚಾರ್ಯ ಭಾವೆ ಸಲಹೆ ಮಾಡಿರುವರು.

ಡೆಲ್ಲೀ ಚೆಲೋ

ಜಯವುಂ— ಗಂಗಾಸಗರ ಜಿಲ್ಲೆಯ ಹತ್ತಿರ ಪಾಸಿಸುತ್ತಿರುವ 'ಪಾಕಿಸ್ತಾನಿಗಳಿಗೆ ಅಲಿಯ ಸಂಕಾರಿ ಅಧಿಕಾರಿಗಳು 'ಡೆಲ್ಲೀ ಚೆಲೋ' ಘೋಷಣೆ ಹೇಳಿಕೊಡುತ್ತಿರುವರೆಂದು ವಂದಿಯಾಗಿದೆ.

ಕೊಲಂಬೋದಲ್ಲಿ ಪೆಟ್ರಾಸ್ಟೆ ಅದಮಳಿಯಿಂದ ತುಂಬಾ ಅಸ್ವಸ್ಥನಾಸಿ, ನಪ್ಪಗೊಂಡು 18 ಸಾರಿ ಮೂರಿ ವಮನವಾಗಳಿಲ್ಲದವಂತಾದರು

ಭಾರತ ರಕ್ಷಣೆಗೆ ಸೇರಲು ಸಿಕಿಂ ಮಹಾದಾಜರವರ ಮನವಿ

★

ದುರ್ಘಟನೆ

ವಿಶಾಖಪಟ್ಟಣ — ಎದುರು ಬರುತ್ತಿದ್ದ ಎರಡು ಹಡಗುಗಳ ಮಧ್ಯೆ ಸಿಕ್ಕಿದ ಒಬ್ಬ ರೈಲ್ವೇ ಪಾಯಿಂಟ್ಸ್‌ಮನ್ ಮೃತನಾದನು.

★

'ಅಮೇರಿಕಾ ಕೊಳ್ಳಿಯುದು'

ವಾಷಿಂಗ್ಟನ್— ಅಮೇರಿಕಾವು ನಿರ್ಣಾಣ ದ್ವೀಪಗಳನ್ನು ಕೊಳ್ಳಲು ಸಿದ್ಧವಿರುವುದಾಗಿ ಪ್ರಕಟವಾಗಿದೆ.

ಖಂಡನಾ ಚಳವಳ

ನವದೆಹಲಿ— ಭಾರತದ ವಿರುದ್ಧ ಮಾಡುತ್ತಿರುವ ಅಪಪ್ರಚಾರವನ್ನು ಖಂಡಿಸಲು ಚಳವಳವಾಗಬೇಕೆಂದು ರಾಜ್ಯಗಳ ಮಂತ್ರಿ ಮತ್ತು ವಾರ್ತಾಧಿಕಾರಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು

★

ಅಮಿತ್ರ ಕಾರ್ಯ

ಬೊಂಬಾಯಿ— ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸಂಬರಾಜನ್ನು ಅಮಿತ್ರ ಕಾರ್ಯವೆಂದು ಪರಿಗಣಿಸಲಾಗುವುದೆಂದು ಭಾರತದ ವಾಶ್ವಾತ್ಯ ಶಕ್ತಿಗಳಿಗೆ ತಿಳಿಸುವ ಕಾಲ ಬಂದಿತ ವುದೆಂದು ಭಾರತದ ಪೂಜೆ ರಕ್ಷಣಾ ಮಂತ್ರಿ ಕೃಷ್ಣಮೆನನ್ ರವರು ಹೇಳಿದರು

ಅಕ್ಕಿ

ನವದೆಹಲಿ— ಇನ್ನು 10 ವರ್ಷಗಳಲ್ಲಿ ವಿಶ್ವದ ಸರಾಸರಿ ವಾರ್ಷಿಕ ಅಕ್ಕಿ ಉಪ್ಪತ್ತಿಯು ಈಗಿನ 157 ಮಿಲಿಯನ್ ಟನ್ನುಗಳಿಗಿಂತ 60 ರಿಂದ 100 ಟನ್ನುಗಳಷ್ಟು ಹೆಚ್ಚಬಹುದೆಂದು ಅಹಾರ ವಸ್ತು ವ್ಯವಸಾಯ ಸಂಸ್ಥೆ ಯ ಅಧಿಕಾರಿಯು

ಗಾಂಗಟಕಾರ್— ಸಿಕಿಮಿನವರೂ ಅದೃಷ್ಟ ಭೂತಿಯಾ ಸಿಕಿಮಿನವರು ಹೆಚ್ಚಿನಾಗಿ ಭಾರತ ರಕ್ಷಣಾ ಸೇವೆಯಲ್ಲಿ ಸೇರಬೇಕೆಂದು ಸಿಕ್ಕಿಂ ಮಹಾರಾಜರು ಮನವಿ ಮಾಡಿದ್ದಾರೆ.

ಶ್ರೀನಗರ

ಶ್ರೀನಗರ— ಇಲ್ಲಿಯ ಕೆಲವು ಒಳ ಭಾಗಗಳಲ್ಲಿ ಷೇಕ್ ಅಬ್ದುಲ್ಲರು ಊಟಿಯಲ್ಲಿ ನಿರ್ಬಂಧಿಸಲ್ಪಟ್ಟಿರುವದಕ್ಕೆ ಪ್ರತಿಭಟನೆ ನಡೆಯಿತು

★

ಕರಾಚಿ— ಭಾರತವು 20 ಡಿವಿಜನ್ ಸೇನೆ ಮತ್ತು ಎಲ್ಲ ಶಸ್ತ್ರಾಸ್ತ್ರಗಳ ಪುಕ್ಕಿಯುತ ವೈಮಾನಿಕ ವಿಭಾಗವನ್ನು ಪಾಕಿಸ್ತಾನದ ಬೇಲೆ ನುಗ್ಗಲು ಮಾಡಿಕೊಂಡಿದೆಯೆಂದು ಪಾಕಿಸ್ತಾನ ಸರಕಾರ ನಿಂದಿಸಿದೆ.

★

ಮಾಸ್ಕೊ—ಪಾಕಿಸ್ತಾನವು ಕಚ್‌ನ ರಾಣ್‌ನನ್ನು ಬಿಟ್ಟುಕೊಟ್ಟು ಶಾಂತಿಯುತ ಒಪ್ಪಂದವಾಗುವಂತೆ ಮಾಡುವುದೆಂದು ರಷ್ಯಾ ಇಚ್ಛಿಸಿದೆ.

ಶಾಂತಿ

ರಾವಲ್ಪಿಂಡಿ— ಷೇಕ್ ಅಬ್ದುಲ್ಲರ ಮೇಲೆ ನಿರ್ಬಂಧ ಹಾಕಿರುವುದು ಭಾರತ ಸರಕಾರದ ಹಿಡಿತವಿಲ್ಲದ ಪಕ್ಷ, ನ್ಯಾಯವಿಲ್ಲದ ಕಾರ್ಯವಾಗಿದೆಯೆಂದು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಭುಟ್ಟೊ ಹೇಳಿದರು

ವಾಷಿಂಗ್ಟನ್— ಭಾರತವು ಪಾಕಿಸ್ತಾನದ ಮೇಲೆ ಎರಡೇ ದಿನಗಳ ಪ್ರಾಪ್ತ ಪಿಶಾಚಿದಸ್ತು ತಪ್ಪಿಸಲು ಅಮೇರಿಕಾ ಶ್ರಮಿಸುತ್ತಿದೆ.

ಭಾರತದಲ್ಲಿ ತಕ್ಷೀರುಗಳು ಹೆಚ್ಚುತ್ತಿವೆ

ಉತ್ತರ ಪ್ರದೇಶದ ಜೈಲುಗಳಲ್ಲಿ ಕಳೆದ ಜನವರಿಯಲ್ಲಿ ದಿನದ ಸರಾಸರಿ ಖೈದಿಗಳ ಸಂಖ್ಯೆ 41315 ಎಂದು ಶಾಸನಸಭೆಯಲ್ಲಿ ಜೈಲು ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು ಕೆಲ ದಿವಸಗಳ ಹಿಂದೆ ಶಾಸನಸಭೆಯಲ್ಲಿ ತಿಳಿಸಿದರೆಂದು ವರದಿಯಾಗಿದೆ.

ನಲಂದ ವಿಶ್ವವಿದ್ಯಾಲಯ

ನಲಂದದಲ್ಲಿ 10 ವರ್ಷ ಕಾಲ ವಾಸಿಸಿದ ಪ್ರಖ್ಯಾತ ಚೀನಾ ಪರಿವ್ರಾಜಕ ಹುಯಾನ್ತ್ಸಾಂಗ್- ಅವನ ವಿವರಣೆಯಲ್ಲಿ ಹೀಗೆ ತಿಳಿಸಿರುತ್ತಾರೆ— ಅತನು ಅಲ್ಲಿಯ ಪವಿತ್ರ ಬೌದ್ಧಗ್ರಂಥಗಳ ನಕಲು ಬರೆಯುತ್ತಿದ್ದರು : ಆ ಸ್ಥಳ ರಕ್ಷಣಾಗಾರ, ರಕ್ಷಣದಂಡ ಮತ್ತು ರಕ್ಷಾಜಲ ಎಂದು ಕರೆಯಲ್ಪಡುತ್ತಿದ್ದವು : ಈ ವೈಶಿಷ್ಟ್ಯದ 9 ಅಂತಸ್ತಿನ ಕಟ್ಟಡವಲ್ಲಿ ಪುಸ್ತಕಭಂಡಾರವಿದ್ದಿತು : ಎಲ್ಲ ಸೇರಿ 8 ಹಜಾರಗಳೂ 300 ಕೊಠಡಿಗಳೂ ಇದ್ದವು ; ಭೋಜನವು ಉಚಿತವಾಗಿ, ಎಲ್ಲರಿಗೂ ಒಂದೇ ರೀತಿಯ ! ಹಕ್ಕಲಿನಲ್ಲಿ ಭಾವಿಗಳಿದ್ದವು : ಕೊಠಡಿಗಳು ಒಬ್ಬರು ಅಥವಾ ಇಬ್ಬರು ಇರುವಂತಿದ್ದವು : ಪ್ರತಿ ವಿದ್ಯಾರ್ಥಿಯು ಚಟುವಟಿಕೆ ಎಂಬ ಮಲಗುವ ಚಾಪೆಯನ್ನು ಹೊಂದಿದ್ದನು : ಪ್ರತಿ ಕೊಠಡಿಯಲ್ಲೂ ದೀಪ ಮತ್ತು ಪುಸ್ತಕಗಳಿರಲು ಪ್ರತ್ಯೇಕ ಕಪಾಟಗಳಿದ್ದವು : ಪ್ರವೇಶಕ್ಕೆ ವಿದೇಶೀಯ ಗುಂಪಿದ್ದು, 10 ರಲ್ಲಿ 3 ಕ್ಕಿಂತ ಹೆಚ್ಚು ಮಂದಿ ಪ್ರವೇಶ ಪಡೆಯುವುದರಲ್ಲಿ ವಿಜಯಿಗಳಾಗುತ್ತಿದ್ದರು : ಹೀಗಾಗಿ ದಾಖಲಾತಿಯಲ್ಲಿ 10 ಸಾವಿರ ವಿದ್ಯಾರ್ಥಿಗಳೂ 1 ಸಾವಿರ ಉಪಾಧ್ಯಾಯರೂ ಇದ್ದು ವಿಶ್ವವಿದ್ಯಾಲಯವು 2 ನೇ ಶತಮಾನದಿಂದ 8 – 9 ಶತಮಾನಗಳವರೆಗೆ ಮುಂದುವರಿದಿತ್ತು ; ಭೂಮಿ ಗ್ರಾಮಗಳಿಂದ ಸಂಸ್ಥೆಗೆ ಧನಸಹಾಯವಾಗುತ್ತಿತ್ತು.

ಆ ಕಾಲದಲ್ಲಿ ಭಾರತ ವಿಶ್ವವಿದ್ಯಾಲಯಗಳಿಗೆ ಚೀನಾ, ಟಿಬೆಟ್, ಜಾವಾ ಸುಮಾತ್ರಾ, ಕೊರಿಯಾ, ಗ್ರೀಸ್, ಇರಾಕ್, ಅರೇಬಿಯಾದಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಇಲ್ಲಿ 10 ವರ್ಷಗಳಿಗೆ ಹೆಚ್ಚಾಗಿದ್ದು, ತರ್ಕ, ವೈದ್ಯ, ಖಗೋಳ ಶಾಸ್ತ್ರಗಳಲ್ಲಿ ನೈಪುಣ್ಯ ಪಡೆಯುತ್ತಿದ್ದರು : ಪ್ರಖ್ಯಾತ ಗ್ರೀಕ್ ಇತಿಹಾಸಕಾರನು ಭಾರತೀಯರು ಭಾರಿ ವೈದ್ಯರೆಂದು ಪ್ರಶಂಸಿರುವನು. — Truth

—o—

ತುಳು ಗಾದೆಗಳು

ಜಾಗೆ ಒದಗದ ಕಂಬಳಿ ಏಕೆ ?

ಊರಿಗೆ ಅರಸನಾದರೂ ತಾಯಿಗೆ ಮಗ.

ಹಸಿವೆಗೆ ಸಿಹಿ ಬೇಡ, ನಿದ್ದೆಗೆ ಹಾಸಿಗೆ ಬೇಡ.

ಊಟವ ತಾಯ್ಗಳಿಕ್ಕು ಹುಂಜೆ ದೇವತಾಯ್ಗಳ್.

ಮಾವಿನಹಣ್ಣು ದೇವತೆಗಳ ತಿನಸು, ಹಲಸಿನ ಹಣ್ಣು ರಾಕ್ಷಸರ ತಿನಸು.

ಮನೆ ಕೊಟ್ಟ ಧನಿಯನ್ನೂ ಮೊಲೆಯುಣ್ಣಿಸಿದ ತಾಯನ್ನೂ ಮರೆಯಕೂಡದು.

ಹೋಗುವೆ-ಬರುವೆ ಎನ್ನುವ ಹೆಣ್ಣು ಸಲ್ಲ, ಏಳ-ಕೂರ ಎನ್ನುವ ಮಹಿಳೆಯಲ್ಲ.

[ಮಂ. ಪ್ರ]

ಗೋರಕ್ಷಣ ಪತ್ರಿಕೆಯ ಸಮಸ್ತ ಕಾರ್ಯಗಳನ್ನು ಹೆಚ್ಚಿಸುವುದಕ್ಕಾಗಿ ನಡೆಯುತ್ತಿದೆ.

ವುಡ್‌ಲಾಂಡ್ 7–5–65 ರಿಂದ
ಶಿ ನಿ ನೈಭವ ಆರಂಭ

ಶರಾಬಿ (ಹಿಂದಿ) Sharabi

ಪಾತ್ರ— ದೇವಾನಂದ್, ಮಧುಬಾಲ, ಲಲಿತ ಪವಾರ್, ಮುಂತಾದವರು
ಸಂಗೀತ : ಮದನಮೋಹನ್ — ಡೈರೆಕ್ಷನ್ ; ರಾಜ್ ಖೋಸ್ಲಾ
ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜನಪ್ರಿಯತೆ 2 ನೇ ವಾರ
ಅವ್ಯೋಘ ಕನ್ನಡ ಚಿತ್ರ — ದಿನ 3 ಆಟಗಳು
ಸರ್ವಜ್ಞಮೂರ್ತಿ [ಕನ್ನಡ]
ಪಾತ್ರ– ರಾಜಕುಮಾರ್, ಉದಯಕುಮಾರ್, ಹರಿಣಿ, ವೈನಾವತಿ, ಬಾಲಕೃಷ್ಣ

SHAKTI
SUDHA

A Superb Tonic

Help The Gorakshana

★

"ಗೋರಕ್ಷಣ"ಕ್ಕೆ ಜಂಬಲಿಗಡವಾಗಿರಿ

ಶ್ರೀ ಧರ್ಮಪ್ರಚಾರಕ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಪಡೆಯುತ್ತಿದೆ
ಕರ್ನಾಟಕದಲ್ಲಿ ಗೋರಕ್ಷಣೆ; ಧರ್ಮಪ್ರಚಾರ; ಶಾಸ್ತ್ರಾಭ್ಯಾಸ; ಪಶುವೈದ್ಯ
ವಿಷಯಗಳಿಂದ ಕೂಡಿದ ಏಕೈಕ ಪ್ರಮಾಣಿಕ ಪತ್ರಿಕೆ.
ವಾರ್ಷಿಕ ಚಂದಾ 50 ಪೈಸೆ ; "ಗೋರಕ್ಷಣ"ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ಚಂದಾಪೂರ್ವಕವಾಗಿ ಸ್ವೀಕರಿಸಲಾಗುವುದು
ವಿಳಾಸ— ಗೋರಕ್ಷಣ ಆಫೀಸು ಶಾರದಾವಿಲಾಸಪುರಂ, ಮೈಸೂರು 4

Edited, Printed & Published by the Proprietor
Dharma Prachara Nivata M S Krishna Rao
at the Satyavadi Press Gomanapuram Mysore 4